# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ ರಾಣೆಬೆನ್ನೂರು

**ಸಿ.ಸಿ.657/2022**

ಪಿರ್ಯಾಧಿ : ರಾಣೆಬೆನ್ನೂರು ಸಂಚಾರ ಪೊಲೀಸ್ ಠಾಣೆ

**ವಿರುದ್ಧ**

ಆರೋಪಿ : ನವೀನಕುಮಾರ ತಂದೆ ಗೋಪಾಲಬಾಯ್ ಸೊಧಾ,
ವಯಸ್ಸು 22 ವರ್ಷ,
ವಾಸಃ-ಬಿ/4 ಕೋಡಿಯಾರ ನಗರ,
ಲಂಭಾ ಗಮ್, ಲಂಭಾ, ತಾಃ ಅಹ್ಮದಾಬಾದ್,
ಅಹ್ಮದಾಬಾದ್ ಗ್ರಾಮೀಣ, ಗುಜರಾತ್.

**ಆಪಾದನೆ**

ದಿನಾಂಕ 08.01.2022 ರಂದು ಸುಮಾರು ಬೆಳಗ್ಗೆ 4.00 ಗಂಟೆಗೆ ರಾಣೆಬೆನ್ನೂರಿನ ಬೈಪಾಸ್ ಹಳೇ ಅಂತರವಳ್ಳಿ ಬ್ರಿಡ್ಜ್ ಹತ್ತಿರ ಹಾವೇರಿ-ದಾವಣಗೆರೆ ಎನ್‌ಎಚ್-4 ರಸ್ತೆ ಮೇಲೆ ಆರೋಪಿಯಾದ ನೀವು ನಿಮ್ಮ ಬಾಬ್ತು ಐಶರ್ ಕ್ಯಾಂಟರ್ ಲಾರಿ ನಂ.ಜಿಜೆ-02-ವಿವಿ-0660 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಮ್ಮ ಮುಂದೆ ಹೋಗುತ್ತಿದ್ದ ಯಾವುದೋ ವಾಹನವನ್ನು ಓವರ್‌ಟೇಕ್ ಮಾಡಲು ಹೋಗಿ ನಿಮ್ಮ ವಾಹನವನ್ನು ಪಲ್ಟಿ ಮಾಡಿ ಅದರಲ್ಲಿದ್ದ ಕ್ಲೀನರ್ ಅಜಯ ಠಾಕೂರ್ ತಂದೆ ಜಯಂತ್ ಬಾಯ್ ಠಾಕೂರ್ ಈತನ ಎಡಗೈ ಕಟ್ಟಾಗುವಂತೆ ಮಾಡಿದ್ದಲ್ಲದೇ, ಹಣೆಗೆ, ಎಡಗಡೆ ಸೊಂಟ, ಚಪ್ಪೆ, ಎಡಗಾಲ ತೊಡೆಗೆ ಭಾರಿ ರಕ್ತಗಾಯಗಳಾಗುವಂತೆ ಮಾಡಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದೀರಾ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲೆ ಹೇಳಿದ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಸದರಿ ಅಪಘಾತದ ಪರಿಣಾಮ ಅಜಯ ಠಾಕೂರ್ ತಂದೆ ಜಯಂತ್ ಬಾಯ್ ಠಾಕೂರ್ ಇವರಿಗೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದು ಹಾಗೂ ಗಾಯಾಳುಗಳಿಗೆ ಯಾವುದೇ ಉಪಚಾರ ಮಾಡದೇ ಆಸ್ಪತ್ರೆಗೆ ಕರೆದುಕೊಂಡು ಹೋಗದೇ ಹಾಗೂ ಅಪಗಾತದ ವಿಷಯವನ್ನು ಪೊಲೀಸ್ ಠಾಣೆಗೆ ತಿಳಿಸದೇ ಹಾಗೆ ಹೋಗಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂ 304 (ಎ) ಹಾಗೂ

ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 134(ಎ)(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದೀರಾ ಎಂದು ನಿಮ್ಮ ಮೇಲೆ ಆರೋಪ ಇದೆ.

ಪ್ರಶ್ನೆ 1: ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ ಅಥವಾ ಅರ್ಥವಾಯಿತೇ?

ಉತ್ತರ : **ಅರ್ಥವಾಯಿತು**

ಪ್ರಶ್ನೆ 2: ನೀವು ಈ ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೇ ?
ಉತ್ತರ : **ವಿಚಾರಣೆಯಾಗಬೇಕು.**

ಆರೋಪಿತನ
ಸಹಿ 1)

(ಮೇಲಿನಂತೆ ಆರೋಪಣೆ ಓದಿ ಹೇಳಿ ಆರೋಪಿಯು ನೀಡಿದ ಉತ್ತರವನ್ನು ನಮೂದು ಮಾಡಿ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುವುದರಿಂದ ವಿಚಾರಣೆಯನ್ನು ನಡೆಯಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ )

Sd/-

ದಿನಾಂಕಃ 07/12/2022 ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ರಾಣೆಬೆನ್ನೂರು